Reg No. M 1299 (Founded 1917) Daily & Weekly

ಸತ್ಯವಾದಿ

SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 28 ಸಂಚಿಕೆ 168] ಶನಿವಾರ 24—3—45 [5 ಪೈ

ಭಾರತದಲ್ಲಿ ಪಾಕಿಸ್ತಾನವಿಲ್ಲವೇ ?

ಲಂಡನ್ನಿನಲ್ಲಿ ನಡೆದ ವೃತ್ತಕಾರರ ಕಾನ್ಫರೆನ್ಸಿನಲ್ಲಿ ಮಂತ್ರಿ ಎಮರಿಯವರು ಭಾರತದಲ್ಲಿ ಬ್ರಿಟಿಷರು ಪಾಕಿಸ್ತಾನ ಯೋಜನೆಗೆ ಕಿವಿ ಕೊಡುವದಿಲ್ಲ ವೆಂದರು.

ಇತ್ತರಲ್ಲೇ ಸ್ಪೇನ್ ಮತ್ತು ಪೋರ್ಚುಗಲ್ ರಾಜ್ಯಗಳು ಜಪಾನಿನ ಮೇಲೆ ಯುದ್ಧ ಹೂಡುವಂತೆ.

ನಾಜಿಗಳ ಕೈಲಿ ಪೈದಿಯಾಗಿದ್ದು ಈಗತಾನೇ ಭಾರತಕ್ಕೆ ಹಿಂದಿರುಗಿದ 15 ಭಾರತೀಯ ಸೈನಿಕರು ನಾಜಿಗಳು ತಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರೆಂದು ಹೇಳಿರುವರು.

ಅಸ್ಸಾಂನಲ್ಲಿ ಎಲ್ಲಾ ಪಾರ್ಟಿಗಳ ಮಂತ್ರಿಮಂಡಲ ರಚನೆಯಾಗ್ಬವುದು. ಕಾಂಗ್ರೆಸ್ಸಿನವರು ಈ ಮಂತ್ರಿಮಂಡಲಕ್ಕೆ ಸೇರದಿದ್ದರೂ ಬೆಂಬಲ ಕೊಡುವರು.

ಲಾರ್ಡ್ ವೇವಲರು ಭಾರತಕ್ಕೆ ಮತ್ತೆ ವೈಸರಾಯರಾಗಿ ಬರುವುದಿಲ್ಲ ವೆಂದೂ, ಲಾರ್ಡ್ ಲೂಯಿ ಮೌಂಟ್‌ಬ್ಯಾಟನರ ಕೆಲಸವನ್ನು ವಹಿಸಿಕೊಳ್ಳುವ ರೆಂದೂ, ಲಾರ್ಡ್ ಟೆಂಪಲ್‌ವುಡ್ಡರು ಭಾರತದ ವೈಸರಾಯರಾಗುವರೆಂದೂ ಲಂಡನ್ನಿನಲ್ಲಿ ಬಲವಾದ ವದಂತಿ ಹುಟ್ಟಿದೆ.

ಸ್ಯಾನ್‌ಫ್ರಾನ್ಸಿಸ್ಕೋ ಸಮೀಳನದಲ್ಲಿ ಪ್ರತಿಯೊಂದು ಜನಾಂಗಕ್ಕೂ ಒಂದೇ ಓಟು.



ಚಕ್ರವರ್ತಿಗಳು ಮಿತ್ರ ನೌಕಾ ಪಡೆಯನ್ನು ಪರಿಶೀಲಿಸುತ್ತಿರುವ ಚಿತ್ರವಿದು.



ಐ.ಜೆ. ಹಾಲ್, ಸೆರಾಫ್ ಅಗ್ರಹಾರ ಡಮೇ ಬೀದಿ, ಮೈಸೂರು.

ಬರೋಡಾ ಮಹಾರಾಜರ ಮೊದಲನೇ ರಾಣಿಯವರಾದ ಶ್ರೀ ಶಾಂತಾದೇವಿ ಯವರು ಬರೋಡಾ ಸಂಸ್ಥಾನದ ಮಹಿಳಾ ಸಭಾ ಪ್ರಾರಂಭೋತ್ಸವವನ್ನು ನಡೆಸಿದ ಸಮಯದಲ್ಲಿ ನುಡಿದ

ಶುಭವಾಕ್ಯಗಳು

ಹಿಂದಿನ 50 ವರ್ಷಗಳಿಂದ ಸ್ತ್ರೀ ಜನೋದ್ಧಾರಕ್ಕಾಗಿ ಅವಿರತವಾಗಿ ಪ್ರಯತ್ನಿಸಿದ ಸಂಸ್ಕರಣೆಗಳೂ, ಇನ್ನೂ ಅತ್ಯಗತ್ಯವಾಗಿ ಕಂಡುಬಂದಾಗ ಮಾಡಿದ ಪ್ರಯತ್ನಗಳೂ ಗರ್ವಿಸಲ್ತಾದ ವಿಷಯಗಳು. ಜೀವನ ಸಾಫಲ್ಯಕ್ಕೆ ಗೃಹವು ಅತ್ಯಂತಾವಶ್ಯಕವಾದದ್ದು. ಒಬ್ಬ ಒಳ್ಳೆಯ ತಾಯಿಯು 1000 ಮಂದಿ ಉಪಾಧ್ಯಾಯರಿಗೆ ಸಮಾನಳಾಗುವಳು. ಈಗಿನ ಯುದ್ಧದಿಂದ ಸ್ತ್ರೀಯರು ತಮ್ಮ ಕೆಲಸಗಳಿಗಿಂತ ಗಂಡಸರ ಕೆಲಸಗಳನ್ನೂ ಸಾಹಸ ಧೈರ್ಯದಿಂದಲೂ ಪ್ರಶಂಸಾರ್ಹ ವಾಗಿಯೂ ಮಾಡಬಲ್ಲರೆಂದು ಸಿದ್ಧವಾಯಿತು.

ಚೀನಾದಲ್ಲಿ ಬಂಗಾರದ ಹೊಸ ಡಾಲರುಗಳು ಉಪಯೋಗದಲ್ಲಿ ಬಂದಿತು ವವು. ಅವುಗಳ ಮೇಲೆ ಚಿಯಾಂಗ ಕೈ ಷೇಕ್ ಮತ್ತು ರೂಸ್ವೆಲ್ಟರ ಚಿತ್ರಗಳಿರುವಂತೆ. ಅದು ಒಂದು ಬೆನ್ನು ಹೂ ಕದ್ದಿರುವುದಂತೆ.

ಟೋಕಿಯೋ ಮೇಲೆ ಆದ ವಿಮಾನ ಧಾಳಿಯಲ್ಲಿ ಒಬ್ಬ ಜಪಾನೀ ಮಂತ್ರಿಯು ಮತ್ತು ಜಪಾನೀ ವಿಧಿಮಂಡಲದ 14 ಮಂದಿ ಸಭಾಸದರು ಕೊಲ್ಲಲ್ಪಟ್ಟರೆಂದು ತಿಳಿಯುಬಂದಿದೆ.

ವಿವಿಧ ವರ್ತಮಾನ

ಯುದ್ಧಾನಂತರ ಪುನರ್ನಿರ್ಮಾಣದಲ್ಲಿ ಕ್ಷಯ ರೋಗದ ನಿವಾರಣೆಯಂ ಕ್ಕೆ ಸುಮಾರು 20 ಕೋಟಿ ರೂ ಯೋಜನೆಯನ್ನು ಸರ್ಕಾರದವರು ಮಾಡಿರುವರು.

ಯಾವ ಒಂದೇ ಕಂಪೆನಿಯು ತಾನೇ ಒಂದು ಗೊತ್ತಾದ ಪದಾರ್ಥವನ್ನು ಮಾರುವ ಹಕ್ಕಿದೆ, ತನ್ನ ಮನಸ್ಸಿಗೆ ಬಂದ ಕ್ರಯಕ್ಕೆ ಮಾರುವ ಹಕ್ಕಿದೆ ಎನ್ನುವದಂತಿಲ್ಲ ಎಂದು ಅಮೇರಿಕಾದ ಕೋರ್ಟು ತೀರ್ಮಾನಿಸಿದೆ. ಇದರಿಂದ ಸಮಾಜದ ನಾನಾಭಾಗದ ಕಾರ್ಪೊರೇಷನ್ ಕಂಪೆನಿಗಳಿಗೆ ಸಿಡಿಲು ಬಡಿದಂತಾಗಿದೆ.

ಮದರಾಸಿನ ಲಕ್ಷ್ಮೀ ವಿಲಾಸ್ ಕಾಂತಿಮೋನಿ ಮೊಖದ್ದಮೆಯಲ್ಲಿ ಸರ್ಕಾರಿ ಪರ ಕ್ರೌನ್ ಪ್ರಾಸಿಕ್ಯೂಟರ ಜೊತೆಯಲ್ಲಿ ಅಡ್ವೊಕೇಟ್ ಜನರಲರೂ ವಕಾಲತ್ತು ವಹಿಸುವರು.

ಬಂಗಾಳಾ ಗೌರ್ನರರು ಮುಂದಿನ ವಾರ ಮದರಾಸಿಗೆ ಬಂದು ಅಲ್ಲಿ ಆಹಾರವು ಯಾವ ರೀತಿ ಹಂಚಲಾಗುತ್ತಿದೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಲಾಗಿದೆಯಂತೆ.

ಯಂತ್ರಗಳು ಪಾಶ್ಚಾತ್ಯರದು. ಇದರಿಂದ ದೇಶಕ್ಕೆ ಯಾವ ಬಗೆಯ ಸಹಾಯವೂ ಇಲ್ಲ, ನಷ್ಟ ಅಧಿಕವೆಂದು ಗಾಂಧೀಜಿಯವರು ಹೇಳಿದರು.

ಬೆಂಗಳೂರು ಕ್ಷಿವಗರವ ಬೊಂಬಾ ಬಜಾರಿನಲ್ಲಿ ನಿನ್ನೆ ಮದಾಹ್ನ ಬೆಂಕಿ ಕಾಣಿಸಿಕೊಂಡು ಬೊಂಬಯಿನ ಅಂಗಡಿಗಳೂ ಫ್ಯಾಕ್ಟರಿಗೂ ಮನೆಗಳೂ ಎಲೆಕ್ಟ್ರಿಕ್ ದೀಪದ ಕಂಬಿಗಳೂ ಅಗ್ನಿಪಾಲಾಗಿ ಒಕ್ಕಾಂತರ್ಧ ರೂ. ನಷ್ಟವಾಗಿದೆ.

ಉದ್ಯಾವಾದ ಸೂಲಿನ ಜಾತಿಯ ಹತ್ತಿಯನ್ನು ಬೆಳೆದು ಬಟ್ಟೆ ತಯಾರ್ಮಾಡಲು ಮೈಸೂರು ಸಂಸ್ಥಾನದಲ್ಲಿ ಹೊಸದಾಗಿ ಒಂದು ಬಟ್ಟೇ ಮಿಲ್ ನೆಂಜನಗೂಡಿನಲ್ಲಿ 30 ಲಕ್ಷ ಬಂಡವಾಳದಲ್ಲಿ ಸ್ಥಾಪನೆಯಾಗುವುದು. ಮದ್ದೂರಿನ ಜಿನ್ನಿಂಗ್ ಫ್ಯಾಕ್ಟರಿಯು ಈ ಹೊಸ ಕಂಪೆನಿಗೆ ಸೇರಿಸಲಾಗುವುದು.

ಅಮೀರಿಕೆಯಿಂದ ಮೈಸೂರಿಗೊರ್ತಿದ್ದ ಕೈಲಿನಲ್ಲಿ ಫುಟ್‌ಬೋರ್ಡಿನ ಮೇಲೆ ಪ್ರಯಾಣ ಮಾಡಿದರೆಂದು 6 ಮಂದಿಗೆ ತಲಾ ರೂ. 2 ಜುಲ್ಮಾನೆಯಾಯಿತ್ತು.

ರಾಜಧಾನಿಯ ಪೌರಸಭೆಯ ತಿಂಗಳಗಟ್ಟಿ ಮೀಟಿಂಗು ಇದೇ 31 ನೇ ಶನಿವಾರ ಸಾಯಂಕಾಲ ೪ ಘಂಟೆಗೆ ನಡೆಯುವುದು.

ವಾರ್ತಾತರಂಗ

ತುರ್ಕಿಯಲ್ಲಿ ಭೂಕಂಪವಿಳಿಗಿ ಸಾವುನೋವುಗಳಾಗಿವೆ.

ಮದರಾಸಿನಲ್ಲಿ ಹಾರ್ಲಿಕ್ಸ್ ಮತ್ತು ಗ್ಲಾಕೋಸನ್ನು ಅಧಿಕ ಬೆಲೆಗೆ ಮಾರಿದ ಒಬ್ಬ ವರ್ತಕನಿಗೆ ರೂ. 800 ಜುಲ್ಮಾನೆಯಾಯಿತು.

ಮದರಾಸಿನಲ್ಲಿ ಹಾಲನ್ನು ಕೊ ಆಪರೇಟಿವ್ ಸೊಸೈಟಿ ಮುಖೇನ ಮಾತ್ರ ಲು ಸರ್ಕಾರದವರು ಏರ್ಪಡಿಸಿದ್ದಾರೆ.

ಮದರಾಸಿನಲ್ಲಿ ಏಲಕ್ಟ್ರಿಕ್ ಬಲ್ಬು ಮತ್ತು ಥರ್ಮೋಫ್ಲಾಸ್ಕನ್ನು ಮಾರಲು ನಿರಾಕರಿಸಿದ ಒಬ್ಬ ವ್ಯಾಪಾರಿಗೆ ರೂ. 11100 ಜುಲ್ಮಾನೆಯಾಯಿತು.

ಭಾರತದಲ್ಲಿ ಕೆಲಸಮಾಡಲು ಆಸ್ಟ್ರೇಲಿಯಾ ಸ್ತ್ರೀಯರು ಇಷ್ಟರಲ್ಲೇ ಒರುವವರಾಗಿರುವರು.

ಭಾರತದಲ್ಲಿ ತಂತೀವರ್ತಮಾನದ ದರ ಹೆಚ್ಚಿತು. ನೊದಲು 8 ಮಾತಿಗೆ 13 ಆಣೆ, ಮುಂದಿನ ಪ್ರತಿ ಮಾತಿಗೂ 1 ಆಣೆ, ಅರ್ಜಂಟ್ ಟೆಲಿಗ್ರಾಂಗಳಿಗೆ ಇದರ ಎರಡರಷ್ಟು.

500 ವರ್ಷಗಳಿಂದ ಡಾರ್ಡನಲ್ಸ್ ಜಲಸಂಧಿಯು ತುರ್ಕಿಯ ಅಧೀನದಲ್ಲಿದ್ದು ಯುದ್ಧಕಾಲದಲ್ಲಿ ಯಾವ ಯುದ್ಧನೌಕೆಗಳೂ ಓಡಾಡುವುದಕ್ಕೆ ಅಡಚಣೆಯಾಗಿದ್ದಿತು. ಈಗ ರಷ್ಯಾಕ್ಕೆ ಇಲ್ಲಿಂದ ಸಾನುಗ್ರಿ ಕಳುಹಿಸುವ ಹಕ್ಕು ದೊರೆತಿದೆ.

ಕರಾಚಿ-ಕೋಟ್ರ ನಡುವೆ ರೈಡ್ವ ಗುಡ್ಸ್ ಗಾಡಿಯು ಪ್ರಯಾಣೀಕರ ಗಾಡಿಗೆ ಡಿಕ್ಕಿ ಹೊಡೆದು 25 ಮಂದಿ ಸತ್ತರು. 30 ಮಂದಿಗೆ ಗಾಯವಾಗಿದೆ.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿ ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು
ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ ಅಮೋಘ 2 ನೇ ವಾರ

At Ranjit Pagli Duniya

ರಣಜಿತ್ ಟಾಕೀಸಿನಲ್ಲಿ

ಪಗಲಿ ದುನಿಯಾ
(ಹಿಂದಿ)

ನುನ್ಮಾಜ್ ಶಾಂತಿ ಮೋತಿಲಾಲ್ ಜೇಕ್‌ಮುಕ್ತಾರ್
ಪಾತ್ರವಹಿಸಿರುವರು

AT OPERA — DOST

ಅಪೆರಾ ಟಾಕೀಸ್

ಮೋತೀಲಾಲ್, ನೂರ್‌ಜಹಾ ಪಾತ್ರವಹಿಸಿರುವ

ದೋಸ್ತ್ (ಹಿಂದಿ)

— NEXT CHANGE —

Air Raid Wardens

With Stan Laurel & Oliver Hardy

TALK-A-TONE

(The Pioneer Film-mag
of S. India)

From 1-3-45 Re. 1 per copy.

Local Agent—D. Mahaadev
Opera Talkies, Mysore

Good Coffee

Sastry's Coffee Rooms
Chamarajapuram, Mysore

For Good Printing—

L. N. Press

Srirampet MYSORE

ಅಕ್ಕರ

ಸಾಮಾಜಿಕ
ಭಾವಪರಿಪೂರ್ಣವಾದ ಕಥೆ

ಓದಲು ವ್ಯಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore.